ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ದಿನಾಂಕ 30-9-2000 ರಲ್ಲಿದ್ದಂತೆ ಒಟ್ಟು 9.16 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ.

ಆ) ಸಕ್ಕರೆ ಬಿಡುಗಡೆಯು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಅಗತ್ಯ ಸನ್ನಿವೇಶಗಳಲ್ಲಿ ಹೆಚ್ಚಿನ ಸಕ್ಕರೆ ಬಿಡುಗಡೆಗೆ ಕೇಂದ್ರ ಸರ್ಕಾರವನ್ನು ಕೋರಲಾಗುತ್ತಿದೆ. ಕೇಂದ್ರ ಸರ್ಕಾರವೂ ಕೂಡ ರಫ್ತು ಮಾಡಲು ಕ್ರಮ ಕೈಗೊಂಡಿದೆ.

ಇ) 15-8-2000 ರಲ್ಲಿದ್ದಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ. 8922.74 ಲಕ್ಷ ಕಬ್ಬು ಬೆಲೆ ಬಾಕಿ ಇದೆ. ಇದರಲ್ಲಿ ಹಾಲಿ ವರ್ಷದ ಬಾಕಿ ರೂ. 6640.13 ಲಕ್ಷ ಹಾಗೂ ಹಿಂದಿನ ವರ್ಷಗಳ ಬಾಕಿ ರೂ. 2282.61 ಲಕ್ಷಗಳಾಗಿವೆ.

ಸಕ್ಕರೆ ಬೆಲೆಯಲ್ಲಿಯ ಕುಸಿತದಿಂದಾಗಿ ಸಕ್ಕರೆ ಮಾರಾಟವಾಗದೇ ರೈತರಿಗೆ ಕೊಡಬೇಕಾದ ಬಾಕಿ ತೀರುವಳಿಯಾಗದೇ ಬಾಕೀ ಉಳಿದಿದ್ದು ಇದೆ. ಇತ್ತೀಚೆಗೆ ಸಕ್ಕರೆ ಬೆಲೆಯಲ್ಲಿ ಚೇತರಿಕೆ ಕಂಡು ಬಂದಿದ್ದರಿಂದ ಸಕ್ಕರೆ ಮಾರಾಟವಾಗಿ ಆದಷ್ಟು ಶೀಘ್ರದಲ್ಲಿ ಬಾಕಿ ತೀರುವಳಿಯಾಗುವ ನಿರೀಕ್ಷೆ ಇದೆ.

ಈ) ಇತ್ತೀಚಿನ ರಫ್ತು ನೀತಿಯ ಪ್ರಕ್ರಿಯೆ ಈಗತಾನೆ ಪ್ರಾರಂಭವಾಗಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳೂ ಕೂಡ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿವೆ.

ಉ) ಸಕ್ಕರೆ ಕಾರ್ಖಾನೆಗಳು ಸುಮಾರು ರೂ. 700 ರಿಂದ ರೂ. 850 ರ ದರದಲ್ಲಿ ಪ್ರತಿ ಟನ್ನಿಗೆ ಬೆಲೆ ಕೊಡುತ್ತಿದ್ದು ರೂ. 1000 ಪ್ರತಿ ಟನ್ನಿಗೆ ಕೊಡುವ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದೆ ಇರುವುದಿಲ್ಲ.

ಗುಲ್ಬರ್ಗಾ ಜಿಲ್ಲೆ ಸೇಡಂ ಕ್ಷೇತ್ರದ ಪಶು ವೈದ್ಯಕೀಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಹುದ್ದೆಗಳನ್ನು ತುಂಬದೆ ರೈತರಿಗೆ ಅನಾನುಕೂಲ

3103 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಸೇಡಂ ತಾಲ್ಲೂಕು ಮತ್ತು ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು ಕೂಡಿದ) ಸೇಡಂ ನಗರದ ಪಶುವೈದ್ಯಕೀಯ ಆಸ್ಪತ್ರೆ ಇದ್ದು, ಈ ಕ್ಷೇತ್ರದಲ್ಲಿ ಒಟ್ಟು ಪ್ರಾಥಮಿಕ ಪಶು ಚಿಕಿತ್ಸಾಲಯ ಹಾಗೂ ಪಶು ಚಿಕಿತ್ಸಾ ಘಟಕಗಳು ಎಷ್ಟು ಆ ಪೈಕಿ ಮೇಲ್ದರ್ಜೆಗೇರಿಸಿರುವ ಪಶು ವೈದ್ಯಕೀಯ ಕೇಂದ್ರಗಳೆಷ್ಟು?*

ಆ) *ಸೇಡಂ ಕೇಂದ್ರ ಸ್ಥಾನದಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಹುದ್ದೆಗಳೆಷ್ಟು? ಇತರ ಸಿಬ್ಬಂದಿ ವರ್ಗದವರ ಹುದ್ದೆಗಳೆಷ್ಟು? ಇದರಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು? ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ಹುದ್ದೆಗಳೆಷ್ಟು, ಖಾಲಿ ಇರುವ ಸ್ಥಾನಗಳೆಷ್ಟು?*

ಇ) *ಪಶುವೈದ್ಯಕೀಯ ಕೇಂದ್ರ ಹಾಗೂ ಪಶುವೈದ್ಯಕೀಯ ಘಟಕಗಳಲ್ಲಿರುವ ವೈದ್ಯಾಧಿಕಾರಿಗಳ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ಆಸ್ಪತ್ರೆವಾರು, ಕೇಂದ್ರವಾರು, ಘಟಕವಾರು ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಕೇಂದ್ರವಾರು ಘಟಕವಾರು?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಸೇಡಂ ಕ್ಷೇತ್ರದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳು ಈ ಕೆಳಕಂಡಂತೆ ಇವೆ.

ಸೇಡಂ ತಾಲ್ಲೂಕು

1.	ಪಶುವೈದ್ಯ ಆಸ್ಪತ್ರೆ	1
2.	ಪಶು ಚಿಕಿತ್ಸಾಲಯ	2
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	14
		17

ಚಿತ್ತಾಪುರ ವಿಧಾನಸಭಾ ಕ್ಷೇತ್ರ

1.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	2
	ಒಟ್ಟು	**19**

ಆ) ಸೇಡಂ ಪಶು ಆಸ್ಪತ್ರೆಯಲ್ಲಿ ಈ ಕೆಳಕಂಡ ವೈದ್ಯರು ಮತ್ತು ಸಿಬ್ಬಂದಿ ವರ್ಗದವರು ಇರುತ್ತಾರೆ.

1.	ಸಹಾಯಕ ನಿರ್ದೇಶಕರು	1
2.	ಪಶುವೈದ್ಯಾಧಿಕಾರಿಗಳು	2 (ಖಾಲಿ ಇರುತ್ತದೆ)
3.	ಪಶುವೈದ್ಯ ಪರೀಕ್ಷಕರು	1
4.	ಪಶುವೈದ್ಯ ಸಹಾಯಕರು	1
5.	ವಾಹನ ಚಾಲಕ	1
6.	'ಡಿ' ವರ್ಗದ ನೌಕರರು	3 (1 ಹುದ್ದೆ ಖಾಲಿ ಇರುತ್ತದೆ)

ಇ) ಇತರ ಪಶು ಚಿಕಿತ್ಸಾಲಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಈ ಕೆಳಕಂಡಂತೆ ವೈದ್ಯರು ಹಾಗೂ ಸಿಬ್ಬಂದಿವರ್ಗದವರು ಇರುತ್ತಾರೆ.

ಪಶು ಚಿಕಿತ್ಸಾಲಯ ಮುಳಖೆಡ

ಪಶು ವೈದ್ಯಾಧಿಕಾರಿ	1
ಪಶುವೈದ್ಯಕೀಯ ಪರೀಕ್ಷಕರು	1
ಪಶುವೈದ್ಯ ಸಹಾಯಕರು	1
'ಡಿ'ದರ್ಜೆ ನೌಕರರು	2 (1ಹುದ್ದೆ ಖಾಲಿ ಇರುತ್ತದೆ)

ಪಶು ಚಿಕಿತ್ಸಾಲಯ, ಮೊತಕಪಲ್ಲಿ

ಪಶುವೈದ್ಯಾಧಿಕಾರಿ	1 (ಖಾಲಿ ಇರುತ್ತದೆ)
ಪಶು ವೈದ್ಯಕೀಯ ಪರೀಕ್ಷಕರು	1 (ಖಾಲಿ ಇರುತ್ತದೆ)
'ಡಿ' ದರ್ಜೆ ನೌಕರರು	1 (ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ)

ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು (ಸೇಡಂ ತಾಲ್ಲೂಕು)

	ಪಶುವೈದ್ಯ ಪರೀಕ್ಷಕರು	ಪಶುವೈದ್ಯ ಸಹಾಯಕರು	'ಡಿ' ದರ್ಜೆ ನೌಕರರು	ಒಟ್ಟು
1. ಪತ್ಕುಂಡಾ	1	1 (ಖಾಲಿ)	1 (ಖಾಲಿ)	1+2 ಖಾಲಿ
2. ಹೆಬ್ಬಾಳ. ಟಿ	1	1	1	3+0 "
3. ಅಡರ	1	1 (ಖಾಲಿ)	1 (ಖಾಲಿ)	1+2 "
4. ಬಂಡೇಗಲ್ಲಿ	1 (ಖಾಲಿ)	1 (ಖಾಲಿ	1 (ಖಾಲಿ)	0+3 "
(ನಿಯೋಜನೆ ಮೇಲೆ ಪಶುವೈದ್ಯ ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ)				
5. ರಂಜೋಳಿ	1	1 (ಖಾಲಿ)	1 (ಖಾಲಿ)	1+2 "
6. ಮದಸಾ	1 (ಖಾಲಿ)	1	1	2+1 "
7. ತೋಡ್ಲಾ	1	1	1	3+0 "
8. ತೋಲಕುಂಡಾ	1	1	1	3+0 "
9. ಕುಕ್ಕುಂಡಾ	1 (ಖಾಲಿ)	1	1	2+1 "
10. ಕರಕುಂಟಿ	1 (ಖಾಲಿ)	1	1	2+1 "
11. ಮುಧೋಳ	1	1	1 (ಖಾಲಿ)	2+1 "
12. ನಾಚೇಪಲ್ಲಿ	1	1	1 (ಖಾಲಿ)	2+1 "
13. ಹುಡ್ಲಿ	1 (ಖಾಲಿ)	1	1 (ಖಾಲಿ)	1+2 "
14. ರಿಬ್ಬನ್ ಪಲ್ಲಿ	1 ಖಾಲಿ	1	1 (ಖಾಲಿ)	1+2 "
ಚಿತ್ತಾಪುರ ತಾಲ್ಲೂಕು				
1. ಅಳ್ಳಳ್ಳಿ	1	1	1	3+0 "
2. ಡೋಣಗಾಂವ್	1 (ಖಾಲಿ)	1 (ಖಾಲಿ)	1 (ಖಾಲಿ)	0+3 "
(ನಿಯೋಜನೆ ಮೇಲೆ ಪಶುವೈದ್ಯ ಪರೀಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ)				